

# ಸೂಪರ್ ಮಾಮ್ ಆಗುವ ಮುನ್ನ....

‘ಸೂಪರ್ ಮಾಮ್’ ಅನ್ನಿಸಿಕೊಳ್ಳುವ ಭರದಲ್ಲಿ ಮಕ್ಕಳ ಎಲ್ಲ ಕೆಲಸಗಳನ್ನು ತಾವೇ ಮಾಡುವುದು ಮಕ್ಕಳ ಬೆಳವಣಿಗೆಗೆ ತೊಡಕುಂಟುಮಾಡಿದಂತೆ.

■ ಸವಿತಾ ಮಾಧವ ಶಾಸ್ತ್ರಿ

ಆರನೇ ಕ್ಲಾಸಿನ ನಿಖಿಲ್ ಶಾಲೆಯಿಂದ ಸಿಡುಕುತ್ತಲೇ ಬಂದ. ‘ಅಮ್ಮ, ಇವತ್ತು ನಿನ್ನಿಂದಾಗಿ ನಾನು ಬಯ್ಯಿಸಿಕೊಂಡೆ. ನೀನು ಬುಧವಾರದ ಟೈಮ್ ಟೇಬಲ್ ನೋಡಿ ನನ್ನ ನೋಟ್ಸ್ ಮತ್ತೆ ಟೆಕ್ಸ್ಟ್ ಬುಕ್ಸ್ ಬ್ಯಾಗಿಗೆ ಹಾಕಿದ್ದೆ. ಆದರೆ ಇವತ್ತು ಗುರುವಾರ. ಗಣಿತದ ಪೀರಿಯಡ್ ಇತ್ತು. ನೀನು ಹಾಕಿರಲೇ ಇಲ್ಲ. ಇಡೀ ಪೀರಿಯಡ್ ಕ್ಲಾಸಿನ ಹೊರಗೆ ನಿಲ್ಲೋ ಪನಿಶ್ಮೆಂಟ್ ಸಿಕ್ತು’ ಎಂದು ತಾಯಿಯನ್ನು ದೂರುತ್ತಾ ಒಳನಡೆದ.

ಬೆಳಗಿನ ಗಡಿಬಿಡಿಯಲ್ಲಿ ಹೇಮಾ ಮಗನ ಬ್ಯಾಗಿಗೆ ಪುಸ್ತಕ ಸರಿಯಾಗಿ ತುಂಬದಿದ್ದಕ್ಕೆ ತನ್ನನ್ನೇ ತಾನು ಹಳಿದುಕೊಂಡು ಅವನಲ್ಲಿ ಕ್ಷಮೆ ಕೇಳಿದಳು. ಈ ವಿಷಯವನ್ನು ನನ್ನ ಬಳಿ ಫೋನಿನಲ್ಲಿ ಹೇಳುತ್ತಾ ‘ಯಾಕೋ ಇತ್ತೀಚೆಗೆ ಮರೆವು ಜಾಸ್ತಿ ಆಗಿದೆ ಕಣೇ. ಹೀಗೆಲ್ಲ ಆಯಿತು’ ಎಂದು ಬೇಸರಪಟ್ಟುಕೊಂಡಳು.

ಅವಳನ್ನು ಸಮಾಧಾನಿಸಿದೆ. ‘ಹೌದು, ನಿನ್ನದೇ ತಪ್ಪು. ವೇಳಾಪಟ್ಟಿ ಪ್ರಕಾರ ಪುಸ್ತಕ ತುಂಬದಿದ್ದುದು ತಪ್ಪಲ್ಲ, ಆ ಕೆಲಸವನ್ನು ಮಗನೇ ಮಾಡಿಕೊಳ್ಳಲು ಅವನಿಗೆ ಕಲಿಸದಿದ್ದದ್ದು ದೊಡ್ಡ ತಪ್ಪು’ ಎಂದೆ.

‘ಇದೇನೆ, ಹೀಗೆ ಹೇಳ್ತಾ ಇದೀಯಾ. ಅವನಿಗೆ ಮೊದಲಿಂದಲೂ ವಾಟರ್ ಬಾಟಲ್, ಬ್ಯಾಗ್, ಟಿಫಿನ್ ಎಲ್ಲ ನಾನೇ ರೆಡಿ ಮಾಡಿಕೊಡೋದು’ ಎಂದು ಹೆಮ್ಮೆಯಿಂದ ಹೇಳಿದಳು. ‘ಒಟ್ನಲ್ಲಿ ನೀನು ಸೂಪರ್ ಮಾಮ್ ಆಗುವ ಭರದಲ್ಲಿ ಅವನ ಬೆಳವಣಿಗೆಗೆ ಅಡ್ಡಿಪಡಿಸ್ತಾ ಇದ್ದಿ’ ಎಂದು ಅವಳಿಗೆ ಅವಳ ತಪ್ಪನ್ನು ಮನವರಿಕೆ ಮಾಡಿಸಿದೆ.

ಈಗಿನ ಹೆಚ್ಚಿನ ತಾಯಂದಿರಿಗೆ ತಾವು ಸೂಪರ್ ಮಾಮ್ ಆಗಬೇಕು ಎನ್ನುವ ಬಯಕೆ. ಇದರರ್ಥ, ಮಕ್ಕಳ ಎಲ್ಲ ಕೆಲಸ ಕಾರ್ಯಗಳನ್ನು ತಾವೇ ಮಾಡಿ ಮುಗಿಸಿ, ಮಕ್ಕಳು ಓದಿನ ಕಡೆಗೆ ಹೆಚ್ಚಿನ ಗಮನಹರಿಸಬೇಕು ಎಂದಷ್ಟೇ ನಿರೀಕ್ಷಿಸುತ್ತಾರೆ. ಬೇರೆ ಸಣ್ಣಪುಟ್ಟ ಕೆಲಸಗಳಲ್ಲಿ ಅವರ ಸಮಯ ವ್ಯರ್ಥವಾಗಬಾರದು ಎಂದು ಯೋಚಿಸುತ್ತಾರೆ. ಹೀಗಾಗಿ ಅವರ ಎಲ್ಲಾ ಕೆಲಸಗಳನ್ನು ತಾವೇ ಹೊತ್ತು ಮಾಡುತ್ತಾರೆ. ಹೀಗೆ ಮಾಡುವುದರಿಂದ ಮಕ್ಕಳ ಬೆಳವಣಿಗೆಗೆ ಸಹಾಯ ಮಾಡುವ ಬದಲು ಅವರ ಸಾಮರ್ಥ್ಯವನ್ನು ಕುಗ್ಗಿಸುತ್ತೇವೆ.

ಮಕ್ಕಳು ತೀರಾ ಚಿಕ್ಕವರಿದ್ದಾಗ ಅವರಿಗೆ ಉಣಿಸುವುದು, ತಿನ್ನಿಸುವುದು, ಶಾಲೆಯ ಸಮವಸ್ತ್ರಗಳನ್ನು ತೆಗೆದಿಡುವುದು, ಬ್ಯಾಗ್ ಪ್ಯಾಕ್ ಮಾಡುವುದು ಈ ಎಲ್ಲವನ್ನು ತಾಯಂದಿರು ಮಾಡುವುದು ಅನಿವಾರ್ಯ ಮತ್ತು ಸ್ವಾಭಾವಿಕ. ಆದರೆ ಮಕ್ಕಳು 12–13 ವರ್ಷದವರಾದ ಮೇಲೂ ಅವರ ಸಮವಸ್ತ್ರಗಳನ್ನು ತೆಗೆದಿಡುವುದು, ಅವರ ಕೋಣೆಯನ್ನು, ಓದುವ ಟೇಬಲ್ ಶುಚಿಗೊಳಿಸುವುದು, ಪುಸ್ತಕಗಳನ್ನು ಹೊಂದಿಸಿಡುವುದು ಇದನ್ನೆಲ್ಲ ಮಾಡುತ್ತಾ ಹೋದರೆ ಮಕ್ಕಳು ಕೊನೆಯವರೆಗೂ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಮುಂದೆ ಹಾಸ್ಟೆಲ್‌ನಲ್ಲೋ ಪರವೂರಿನಲ್ಲಿಯೋ ಇರಬೇಕಾದಾಗ ಎಲ್ಲ ಜವಾಬ್ದಾರಿಗಳು ಒಮ್ಮೆಲೇ ಅವರ ಮೇಲೆ ಬಿದ್ದು ಅದನ್ನು ನಿಭಾಯಿಸಲು ಪರದಾಡಬೇಕಾಗುತ್ತದೆ.

ಹೀಗಾಗಿ ಮಕ್ಕಳಿಗೆ ಅವರ ವಯಸ್ಸಿಗನುಗುಣವಾಗಿ ಒಂದೊಂದೇ ಕೆಲಸಗಳನ್ನು ಅವರೇ ಮಾಡುವಂತೆ ನೋಡಿಕೊಳ್ಳಬೇಕು.

- ಮಕ್ಕಳು ಶಾಲೆಗೆ ಹೋಗಲು ಪ್ರಾರಂಭಿಸಿ ಒಂದೆರಡು ವರ್ಷಗಳಲ್ಲಿ ಶೂ ಲೇಸ್ ಕಟ್ಟಿಕೊಳ್ಳಲು, ನೀರಿನ ಬಾಟಲಿ ತುಂಬಿಕೊಳ್ಳಲು ಹೇಳಬೇಕು.
- 3,4ನೇ ತರಗತಿಯ ಮಕ್ಕಳಿಗೆ ಟಿಫಿನ್ ಬಾಕ್ಸ್‌ಗೆ ಸ್ನ್ಯಾಕ್ಸ್ ಹಾಕಿಕೊಳ್ಳಲು, ಶಾಲೆ ವೇಳಾಪಟ್ಟಿಗನುಗುಣವಾಗಿ ಪುಸ್ತಕಗಳನ್ನು ಹಾಕಿಕೊಳ್ಳಲು ಬಿಡಬೇಕು. ಪೋಷಕರು ಮಕ್ಕಳು ಪುಸ್ತಕ ಮರೆತುಬಿಡಬಹುದೆಂದು ತಾವೇ ಬ್ಯಾಗ್ ಪ್ಯಾಕ್ ಮಾಡುತ್ತಾರೆ. ಒಂದೆರಡು ದಿನ ಮರೆಯಬಹುದು. ಆದರೆ ಹೀಗೆ ನೋಟ್ಸ್ ಮರೆತಾಗ ಟೀಚರ್ ಹತ್ತಿರ ಬಯ್ಯಿಸಿಕೊಂಡಾಗ ಅವರಿಗೇ ಜವಾಬ್ದಾರಿ ಬರುತ್ತದೆ.
- ಬೆಳಗಿನ ಗಡಿಬಿಡಿಯಲ್ಲಿ ಮಕ್ಕಳು ತಿಂಡಿ ತಿಂದು ಹೋಗುವುದಿಲ್ಲವೆಂದು ತಾಯಂದಿರು ತಾವೇ ಮಕ್ಕಳಿಗೆ ತಿನ್ನಿಸುತ್ತಾರೆ. ಇದರ ಬದಲು ಮಕ್ಕಳನ್ನು ಹತ್ತು ನಿಮಿಷ ಬೇಗ ಎಬ್ಬಿಸಿ ಅವರೇ ತಿಂಡಿ ತಿನ್ನುವಂತೆ ನೋಡಿಕೊಳ್ಳಬೇಕು. ತಾವು ತಿಂಡಿ ತಿಂದ ಪ್ಲೇಟ್ ತೊಳೆಯುವುದು, ತೆಗೆದಿಟ್ಟ ವಸ್ತುಗಳನ್ನು ಮತ್ತೆ ಅದೇ ಜಾಗದಲ್ಲಿಡುವುದನ್ನು ಅವರಿಗೆ ಅಭ್ಯಾಸ ಮಾಡಿಸಬೇಕು.
- ಪುಸ್ತಕಗಳಿಗೆ ಕವರ್ ಹಾಕುವುದನ್ನು, ಶಾಲೆಯಿಂದ ಬಂದ ಮೇಲೆ ಟಿಫಿನ್ ಬಾಕ್ಸ್ ತೊಳೆಯಲು ಹಾಕುವುದನ್ನು, ಹೀಗೆ ಒಂದೊಂದೇ ಕೆಲಸಗಳನ್ನು ಹೇಳಿಕೊಡುತ್ತಾ, ಅವರು ಕೆಲಸಗಳನ್ನು ಮಾಡಿದಾಗ ಮೆಚ್ಚುಗೆ ಮಾತನಾಡಿ ಅವರನ್ನು ಪ್ರೋತ್ಸಾಹಿಸಬಹುದು.
- ಶಾಲೆಗಳಲ್ಲಿ ನೀಡುವ ಪ್ರಾಜೆಕ್ಟ್‌ಗಳನ್ನು ಹೆಚ್ಚಿನ ಪೋಷಕರು ತಾವೇ ಮಾಡುತ್ತಾರೆ. ಅದರ ಬದಲು ಮಾರ್ಗದರ್ಶನ ನೀಡುತ್ತಾ ಪ್ರಾಜೆಕ್ಟ್‌ಗಳನ್ನು ಅವರ ಕೈಯಿಂದಲೇ ಮಾಡಿಸಿದರೆ ಮಕ್ಕಳಿಗೂ ಖುಷಿ ಮತ್ತು ಅದನ್ನು ತಾವೇ ಮಾಡಿದ್ದು ಎಂಬ ಹೆಮ್ಮೆ ಕೂಡ ಅವರಲ್ಲಿ ಇರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in